# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

| | | |
|---|---|---|
| ¨AU – 4J<br>Part – IVA | ಬೆಂಗಳೂರು, ಸೋಮವಾರ,19,ಅಕ್ಟೋಬರ್, 2020( ಆಶ್ವಯುಜ, 27, ಶಕವರ್ಷ ೧೯೪2)<br>Bengaluru, MONDAY,19,OCTOBER,2020( Aashwayuja,27, ShakaVarsha 1942) | ನಂ. 469<br>No. 469 |


## DEPARTMENT OF PARLIAMENTARY AFFAIRS AND LEGISLATION

## SECRETARIAT

## NOTIFICATION

**NO: DPAL 60 SHASANA 2020, BENGALURU, DATED:19.10.2020**

The Karnataka Municipal Corporations (Second Amendment) Bill, 2020 ಇದಕ್ಕೆ 2020ರ ಅಕ್ಟೋಬರ್ ತಿಂಗಳ 19ನೇ ದಿನಾಂಕದಂದು ರಾಜ್ಯಪಾಲರ ಒಪ್ಪಿಗೆ ದೊರೆತಿದ್ದು, ಸಾಮಾನ್ಯ ತಿಳುವಳಿಕೆಗಾಗಿ ಇದನ್ನು 2020ರ ಕರ್ನಾಟಕ ಅಧಿನಿಯಮ ಸಂಖ್ಯೆ: 32 ಎಂಬುದಾಗಿ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಬೇಕೆಂದು ಆದೇಶಿಸಲಾಗಿದೆ.

## KARNATAKA ACT 32 OF 2020

(First published in the Karnataka Gazette Extra-ordinary on the 19th day of October, 2020)

# THE KARNATAKA MUNICIPAL CORPORATIONS (SECOND AMENDMENT) ACT, 2020

(Received the assent of the Governor on the 19th day of October, 2020)

An Act further to amend the Karnataka Municipal Corporations Act, 1976.

Whereas it is expedient further to amend the Karnataka Municipal Corporations Act, 1976 (Karnataka Act 14 of 1977), for the purposes hereinafter appearing;

Be it enacted by the Karnataka State Legislature in the seventy first year of the Republic of India as follows, namely:-

**1. Short title and commencement.-** (1) This Act may be called the Karnataka Municipal Corporations (Second Amendment) Act, 2020.

(2) It shall come into force at once.

**2. Amendment of section 431-A.-** In the Karnataka municipal Corporations Act, 1976 (Karnataka Act 14 of 1977) (hereinafter referred to as the principal Act), in section 431-A,-

(i) for sub-section (2), the following shall be substituted, namely,-

"(2) Whoever commits any act of commission or omission which is likely to obstruct, impair or fails to comply with the provisions of sub-section (1) or the Solid Waste Management Schemes for the time being in force shall on conviction be punished with fine as specified in the Solid Waste Management bye-laws framed by Corporation under the provisions of Solid Waste Management Rules, 2016 which may extend to rupess two lakh."

(ii) for sub-section (3), the following shall be substituted, namely,-

"(3) The corporation may alter, amend or vary any of the penalties specified in Solid Waste Management bye-laws".

(iii) in the Explanation, for the words, brackets and figures "the Municipal Solid Waste (Management and Handling) Rules, 2000" the words and figures "the Solid Waste Management Rules, 2016" shall be substituted.

**3. Omission of Schedule XIII.-** Schedule XIII of the principal Act, shall be omitted.

By Order and in the name of
the Governor of Karnataka,

**(K. DWARAKANATH BABU)**
Secretary to Government
Department of Parliamentary Affairs
and Legislation

## <u>ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವಾಲಯ</u>

## <u>ಅಧಿಸೂಚನೆ</u>

**<u>ಸಂಖ್ಯೆ: ಸಂವ್ಯಶಾಇ 60 ಶಾಸನ 2020, ಬೆಂಗಳೂರು, ದಿನಾಂಕ:19.10.2020.</u>**

The Karnataka Municipal Corporations (Second Amendment) Bill, 2020 ಇದಕ್ಕೆ 2020ರ ಅಕ್ಟೋಬರ್ ತಿಂಗಳ 19ನೇ ದಿನಾಂಕದಂದು ರಾಜ್ಯಪಾಲರ ಒಪ್ಪಿಗೆ ದೊರೆತಿದ್ದು**,** ಸಾಮಾನ್ಯ ತಿಳುವಳಿಕೆಗಾಗಿ ಇದನ್ನು 2020ರ ಕರ್ನಾಟಕ ಅಧಿನಿಯಮ ಸಂಖ್ಯೆ: 32 ಎಂಬುದಾಗಿ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಬೇಕೆಂದು ಆದೇಶಿಸಲಾಗಿದೆ**.**

### 2020 ರ ಕರ್ನಾಟಕ ಅಧಿನಿಯಮ ಸಂಖ್ಯೆ: 32

(2020 ರ ಅಕ್ಟೋಬರ್ ತಿಂಗಳ 19 ನೇ ದಿನಾಂಕದಂದು ಕರ್ನಾಟಕ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

### ಕರ್ನಾಟಕ ನಗರಪಾಲಿಕೆಗಳ (ಎರಡನೇ ತಿದ್ದುಪಡಿ) ಅಧಿನಿಯಮ, 2020

(2020 ರ ಅಕ್ಟೋಬರ್ ತಿಂಗಳ 19 ನೇ ದಿನಾಂಕದಂದು ರಾಜ್ಯಪಾಲರಿಂದ ಅನುಮತಿಯನ್ನು ಪಡೆಯಲಾಗಿದೆ)

ಕರ್ನಾಟಕ ನಗರಪಾಲಿಕೆಗಳ ಅಧಿನಿಯಮ, 1976ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ಅಧಿನಿಯಮ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ನಗರಪಾಲಿಕೆಗಳ ಅಧಿನಿಯಮ, 1976ನ್ನು (1977ರ ಕರ್ನಾಟಕ ಅಧಿನಿಯಮ 14) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು, ಭಾರತ ಗಣರಾಜ್ಯದ ಎಪ್ಪತ್ತೊಂದನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:-

1. **ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ನಗರಪಾಲಿಕೆಗಳ (ಎರಡನೇ ತಿದ್ದುಪಡಿ) ಅಧಿನಿಯಮ, 2020 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

2. **431ಎ ಪ್ರಕರಣದ ತಿದ್ದುಪಡಿ.-** ಕರ್ನಾಟಕ ನಗರಪಾಲಿಕೆಗಳ ಅಧಿನಿಯಮ, 1976ರ (1977ರ ಕರ್ನಾಟಕ ಅಧಿನಿಯಮ 14) (ಇಲ್ಲಿ ಇನ್ನುಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ) 431ಎ ಪ್ರಕರಣದಲ್ಲಿ,-

(i) (2)ನೇ ಉಪಪ್ರಕರಣಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ :-

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



‘‘(2) ಯಾವೊಬ್ಬ ವ್ಯಕ್ತಿಯು, (1)ನೇ ಉಪಪ್ರಕರಣದ ಉಪಬಂಧಗಳನ್ನು ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಘನ ತ್ಯಾಜ್ಯ ನಿರ್ವಹಣೆ ಸ್ಕೀಮುಗಳನ್ನು ಪಾಲಿಸಲು ವಿಫಲನಾಗಿದ್ದರೆ ಅಥವಾ ಪಾಲಿಸಲು ಅಡ್ಡಿಯಾಗಬಹುದಾದ, ಧಕ್ಕೆಯಾಗಬಹುದಾದ ಯಾವುದೇ ಕೃತ್ಯವನ್ನು ಎಸಗಿದ್ದರೆ ಅಥವ ಬಿಟ್ಟಿದ್ದರೆ ಅಪರಾಧ ನಿರ್ಣೀತನಾದ ಮೇಲೆ ಘನತ್ಯಾಜ್ಯ ನಿರ್ವಹಣೆ ನಿಯಮಗಳು, 2016ರ ಉಪಬಂಧಗಳ ಅಡಿಯಲ್ಲಿ ಪಾಲಿಕೆಯು ರಚಿಸಿದ ಘನತ್ಯಾಜ್ಯ ನಿರ್ವಹಣೆ ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಿದಂತೆ ಎರಡು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯೊಂದಿಗೆ ದಂಡನೀಯನಾಗತಕ್ಕದ್ದು.’’

(ii) (3)ನೇ ಉಪಪ್ರಕರಣಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

“(3) ಪಾಲಿಕೆಯು, ಘನತ್ಯಾಜ್ಯ ನಿರ್ವಹಣೆ ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ದಂಡನೆಗಳನ್ನು ಮಾರ್ಪಡಿಸಬಹುದು, ತಿದ್ದುಪಡಿ ಮಾಡಬಹುದು ಅಥವಾ ಬದಲಾಯಿಸಬಹುದು.’’

(iii) ವಿವರಣೆಯಲ್ಲಿ “ಪೌರಸಭಾ ಘನತ್ಯಾಜ್ಯ (ನಿರ್ವಹಣೆ ಮತ್ತು ನಿಭಾವಣೆ) ನಿಯಮಗಳು, 2000” ಎಂಬ ಪದಗಳು, ಆವರಣ ಚಿಹ್ನೆಗಳು ಮತ್ತು ಅಂಕಿಗಳಿಗೆ “ಘನತ್ಯಾಜ್ಯ ನಿರ್ವಹಣೆ ನಿಯಮಗಳು, 2016” ಎಂಬ ಪದಗಳು ಮತ್ತು ಅಂಕಿಗಳನ್ನು ಪ್ರತಿಯೋಜಿಸತಕ್ಕದ್ದು.

**3. XIIIನೇ ಅನುಸೂಚಿಯ ಬಿಟ್ಟುಬಿಡುವಿಕೆ.-** ಮೂಲ ಅಧಿನಿಯಮದ XIIIನೇ ಅನುಸೂಚಿಯನ್ನು ಬಿಟ್ಟುಬಿಡತಕ್ಕದ್ದು.

The above translation of the Karnataka Municipal Corporations (Second Amendment) Act, 2020 (Karnataka Act 32 of 2020) shall be authoritative text in the Kannada language under section 5A of the Karnataka Official Language Act, 1963 (Karnataka Act 26 of 1963).

**ವಜುಬಾಯಿ ವಾಲ**
**ಕರ್ನಾಟಕ ರಾಜ್ಯಪಾಲರು**

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ಕೆ. ದ್ವಾರಕನಾಥ್ ಬಾಬು)**
ಸರ್ಕಾರದ ಕಾರ್ಯದರ್ಶಿ,
ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಇಲಾಖೆ

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು.

SUNIL GARDE